## ಮಿ- ಟೂ ಹೇಗೆ? ಏನು?

'ಮಿ ಟೂ' ಎಂಬ ಹ್ಯಾಷ್ ಟ್ಯಾಗ್ ಹೊತ್ತ ಟ್ವೀಟುಗಳು ಸಾಮಾಜಿಕ ಜಾಲತಾಣದಲ್ಲಿ ಅಲ್ಲೋಲಕಲ್ಲೋಲ ಉಂಟು ಮಾಡಿವೆ. ಅಮೆರಿಕ ಅಧ್ಯಕ್ಷ ಟ್ರಂಪ್ ಅವರಿಂದ ಹಿಡಿದು, ಸಿನಿಮಾ ನಿರ್ದೇಶಕ ಹಾರ್ವೆ ವೀನ್‌ಸ್ಟನ್‌ನನ್ನೂ ಒಳಗೊಂಡು ಅನೇಕರು ಈ ಆರೋಪಗಳನ್ನು ಎದುರಿಸುತ್ತಿದ್ದಾರೆ. ಅವರ ವಿರುದ್ಧ ಹಲವಾರು ಸಹೋದ್ಯೋಗಿಗಳು ಮತ್ತು ಸ್ನೇಹಿತೆಯರು ಈ ಆರೋಪಗಳನ್ನು ಮಾಡಿ ತಮ್ಮ ಮಾತುಗಳಿಗೆ ಪುರಾವೆಯನ್ನೂ ಒದಗಿಸಿದ್ದಾರೆ. ಇತ್ತೀಚೆಗೆ ಇಂಥದ್ದೇ ಆರೋಪ ಹೊತ್ತ ಬ್ರೆಟ್ ಕವಾನುವಾ ಮೊನ್ನೆ ಅಮೆರಿಕದ ಸುಪ್ರೀಂ ಕೋರ್ಟಿನ ನ್ಯಾಯಾಧೀಶ ಆಗಿ ನೇಮಕಗೊಂಡ ವಿಚಾರ ಹಳತೂ ಆಯಿತು. ಹದಿಹರೆಯದ ದಿನಗಳಲ್ಲಿ ಬ್ರೆಟ್ ತಮ್ಮ ಮೇಲೆ ಅತ್ಯಾಚಾರದ ಪ್ರಯತ್ನ ಮಾಡಿದ್ದರು ಎಂದು ಮನಃಶಾಸ್ತ್ರಜ್ಞೆ ಡಾ. ಕ್ರಿಸ್ಟೀನ್ ಫೋರ್ಡ್ ಹೇಳಿದ್ದನ್ನು ರಾಜಕೀಯ ಕುತಂತ್ರ ಎಂದು ಬಣ್ಣಿಸಿ ಮೂಲೆಗುಂಪು ಮಾಡಲಾಯಿತು.

ಮಿ ಟೂ ಕ್ಯಾಂಪೇನಿಗೆ ದೊಡ್ಡ ಇತಿಹಾಸ ಇದೆ. ತರನ ಬರ್ಕ್ ಎಂಬ ಸಾಮಾಜಿಕ ಕಾರ್ಯಕರ್ತೆ 2006ರಲ್ಲಿ ಶುರು ಮಾಡಿದ ಈ ಹ್ಯಾಷ್ ಟ್ಯಾಗಿಗೆ ಈಗ ಭರ್ತಿ ಹನ್ನೆರಡು ವರ್ಷಗಳು. ಜಗತ್ತಿನಾದ್ಯಂತ ದೊಡ್ಡ ದೊಡ್ಡ ಹೆಸರುಗಳು ಈ ಹ್ಯಾಷ್ ಟ್ಯಾಗಿನ ಆರೋಪಗಳನ್ನು ಎದುರಿಸಿ, ಕೆಲವರು ತಪ್ಪೊಪ್ಪಿಗೆಯನ್ನು ಕೇಳಿಕೊಂಡಿದ್ದಾರೆ. ಈಗ ಈ ಕ್ಯಾಂಪೇನ್ ಭಾರತಕ್ಕೂ ಕಾಲಿಟ್ಟಿದೆ.

ಬಾಲಿವುಡ್‌ನಲ್ಲಿ ನಡೆದ ತನುಶ್ರೀ ಘಟನೆಯ ಚರ್ಚೆ ಸಾಮಾಜಿಕ ಜಾಲತಾಣಗಳಾದ 'ಟ್ವಿಟರ್' ಮತ್ತು 'ಫೇಸ್‌ಬುಕ್'ಗಳಲ್ಲಿ ತೀವ್ರ ಚರ್ಚೆಗೊಳಗಾಯಿತು. ಈ ತೀವ್ರತೆ ಎಷ್ಟರ ಮಟ್ಟಿಗಿದೆಯೆಂದರೆ – ಈಗ ಸಾಮಾಜಿಕ ಜಾಲತಾಣಗಳಲ್ಲಿ ಆಗುವ ಚರ್ಚೆಯೇ ಸುದ್ದಿಮನೆಯ ಸುದ್ದಿಗಳಾಗುತ್ತಿವೆ. ಐದಾರು ವರ್ಷಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ಮಾಧ್ಯಮಗಳು ಕವರ್ ಮಾಡುವ ಸುದ್ದಿಗಳ ಚರ್ಚೆ ಮಾತ್ರ ಸಾಮಾಜಿಕ ಜಾಲತಾಣದಲ್ಲಿ ಮುಂದುವರೆಯುತ್ತಿತ್ತು. ಈಗ ಟ್ರೆಂಡ್ ಪೂರ್ತಿ ಉಲ್ಟಾ ಆಗಿದೆ.



ತನುಶ್ರೀ ದತ್ತಾ

ಉಚಿತ ಕಾನೂನು ಸಹಾಯ ನೀಡುವುದಾಗಿ ಮುಂಬೈಯ ವಕೀಲೆ ರುತುಜಾ ಶಿಂಧೆ ತಿಳಿಸಿದ್ದಾರೆ. 'ಇದು ನಮ್ಮ ಹೋರಾಟ. ನಾವೇ ಇದಕ್ಕೆ ಬೆಂಬಲ ನೀಡದಿದ್ದರೆ ಹೇಗೆ? ಯಾರಾದರೂ ತಮ್ಮ ಮೇಲಿನ ದೌರ್ಜನ್ಯವನ್ನು ಸಾಂಸ್ಥಿಕವಾಗಿ ಪ್ರತಿಭಟಿಸುವ ಇರಾದೆ ತೋರಿದರೆ ಕಾನೂನಾತ್ಮಕ ಹೋರಾಟಕ್ಕೆ ನಾವು ಸಹಾಯ ಮಾಡುತ್ತೇನೆ. ಇದು ಸಂಪೂರ್ಣ ಉಚಿತ' ಎನ್ನುವ ರುತುಜಾ ಅವರ ನಿಲುವು ಸಾಂಕ್ರಾಮಿಕವಾಗಬೇಕು.

### ಆತ್ಮವಿಶ್ವಾಸ-ಎಚ್ಚರಿಕೆ ದನಿ

'ಮಿ ಟೂ' ಹೆಸರಿನಲ್ಲಿ ವ್ಯಕ್ತವಾಗುತ್ತಿರುವ ಹೆಣ್ಣುಮಕ್ಕಳ ನೋವಿನ ಕಥನಗಳಿಗೆ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಮಹತ್ವವಿದೆ. ಹೀಗೆ ಹೇಳಿಕೊಳ್ಳುವ ಮೂಲಕ ಆ ಹೆಣ್ಣುಮಕ್ಕಳು ತಮ್ಮ ಮನಸ್ಸನ್ನು ಹಗುರ ಮಾಡಿಕೊಳ್ಳುವುದರ ಜೊತೆಗೆ, ಸಜ್ಜನಿಕೆಯ ಸೋಗು ಹಾಕಿಕೊಂಡವರ ಮುಖವಾಡಗಳನ್ನು ಬಯಲು ಮಾಡುತ್ತಿದ್ದಾರೆ. ಈ ಪ್ರಸಂಗಗಳು ಇತರ ಹೆಣ್ಣುಮಕ್ಕಳು ಕೂಡ ಈವರೆಗೆ ತಮ್ಮೊಳಗೆ ಬಚ್ಚಿಟ್ಟುಕೊಂಡಿದ್ದ ಕಹಿನೆನಪುಗಳನ್ನು ಹೊರಹಾಕಲು ಪ್ರೇರಣೆ ನೀಡುವಂತಿದೆ. ಹೆಣ್ಣುಮಕ್ಕಳು ಹೀಗೆ ಮುಕ್ತವಾಗಿ ಮಾತನಾಡುವುದು ಅವರ ಆತ್ಮವಿಶ್ವಾಸವನ್ನು ಸೂಚಿಸುವಂತಿದೆ. ಇದೇ ಸಂದರ್ಭದಲ್ಲಿ ಪ್ರಸ್ತುತ ಕಾಕಕಣ್ಣುಗಳಡಿ ಸುಳಿದಾಡುತ್ತಿರುವ ಹುಡುಗಿಯರು ಕಾಮುಕರ ವಿರುದ್ಧ ಸಿಡಿದೇಳಲು ಈ ಆಂದೋಲನ ಪ್ರೇರಣೆಯೂ ಆಗಿದೆ. 'ನಾವಿನ್ನು ಸಹಿಸಿಕೊಳ್ಳಲಾರೆವು' ಎನ್ನುವ ಮನೋಭಾವ ಶೋಷಕ ಗಂಡುಗಳ ಹೆಣ್ಣುಬಾಕತನಕ್ಕೆ ಸಾಕಷ್ಟು ಕಡಿವಾಣ ಹಾಕುವಂತಿದೆ.

ಸಾಮಾಜಿಕ ಜಾಲತಾಣಗಳ ಕುರಿತು ನಕಾರಾತ್ಮಕ ಚರ್ಚೆಗಳೇ ಹೆಚ್ಚು ನಡೆಯುತ್ತಿವೆ. ಇಂಥ ಸಂದರ್ಭದಲ್ಲಿ, ಹೆಣ್ಣಿನ ಸಂಕಟದ ಅಭಿವ್ಯಕ್ತಿಯ ರೂಪದಲ್ಲಿ, ಸಾಂತ್ವನ ಕೇಂದ್ರಗಳ ರೀತಿಯಲ್ಲಿ ಸಾಮಾಜಿಕ ಜಾಲತಾಣಗಳು ಒದಗಿಬಂದಿರುವುದು ಕೂಡ ವಿಶೇಷವೇ.

'ಮಿ ಟೂ' ಪ್ರಕರಣಗಳು ಕೆಲವರಿಗೆ ಪ್ರಚಾರದ ತಂತ್ರಗಳಂತೆಯೂ ಕಾಣಿಸಿವೆ. ಇದನ್ನು ಅಲ್ಲಗಳೆಯುವಂತೆಯೂ ಇಲ್ಲ. ಆದರೆ, ಇಂಥ ಅನುಮಾನಗಳನ್ನು ಮುಂದೊಡ್ಡಿ ಇಡೀ ಆಂದೋಲನವನ್ನು ಗಿಮಿಕ್‌ನಂತೆ ನೋಡುವುದು ಸಿನಿಕತನವಾಗುತ್ತದೆ. ಹೆಣ್ಣು ಮಾತನಾಡಲು ತೊಡಗಿದಾಗಲೆಲ್ಲ ಅಧಿಕಾರಶಾಹಿ ಪುರುಷವರ್ಗದ ಕಣ್ಣಿಗೆ ಆಕೆ ಅಧಿಕಪ್ರಸಂಗಿಯಂತೆ ಕಾಣಿಸಿರುವುದು ಇದು ಮೊದಲೂ ಅಲ್ಲ, ಕೊನೆಯೂ ಅಲ್ಲ.

ಸದ್ಯಕ್ಕೆ 'ಮಿ ಟೂ' ಪ್ರಸಂಗಗಳು ಸಿನಿಮಾ–ಪತ್ರಿಕೋದ್ಯಮದಂಥ ನಿರ್ದಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ವರದಿಯಾಗುತ್ತಿವೆ. ಆದರೆ, ಅಂತರ್ಜಾಲದಿಂದ ಹೊರಗುಳಿದ ಬಹುಸಂಖ್ಯೆಯ ಹೆಣ್ಣುಮಕ್ಕಳ ಅಂತರಾಳದಲ್ಲಿ ಅಡಗಿ ಕುಳಿತಿರುವ ಸಂಕಟಗಳು ಹೊರಬರುವುದಾದರೂ ಹೇಗೆ? ಗ್ರಾಮೀಣ ಹೆಣ್ಣುಮಕ್ಕಳು, ತಳಸಮುದಾಯಗಳ ಹೆಣ್ಣುಮಕ್ಕಳು, ನಿರಕ್ಷರಿ ಹೆಣ್ಣುಮಕ್ಕಳ ವಿಷಯವಿರಲಿ – ವಿಶ್ವವಿದ್ಯಾಲಯಗಳ ಮಟ್ಟದಲ್ಲಿನ ಲೈಂಗಿಕ ಕರ್ಮಕಾಂಡಗಳು ಒಂದೇ ಎರಡೇ? ಪಿಎಚ್.ಡಿ. ವಿದ್ಯಾರ್ಥಿನಿಯರನ್ನು ಗೈಡ್‌ಗಳು ಗೋಳು ಹೊಯ್ದುಕೊಳ್ಳುವ ಕುರಿತ ಕಥೆಗಳನ್ನು ಕಲೆಹಾಕುತ್ತಾ ಹೋದರೆ ಅವುಗಳ ಅಧ್ಯಯನದ ವ್ಯಾಪ್ತಿ ಹಲವು ಪ್ರೌಢ ಪ್ರಬಂಧಗಳನ್ನು ಮೀರಬಹುದು.

ಕೆಲವು ಹೆಣ್ಣುಮಕ್ಕಳಷ್ಟೇ ಮಾತನಾಡುತ್ತಿರುವುದು ನಾವು ಬದುಕುತ್ತಿರುವ ಸಮಾಜ ಒಳಗೊಳಗೇ ಎಷ್ಟು ಗಬ್ಬು ನಾರುತ್ತಿದೆ ಎನ್ನುವುದನ್ನು ಬಯಲುಮಾಡಿದೆ. ಹೀಗಿರುವಾಗ, ಎಲ್ಲ ಹೆಣ್ಣುಮಕ್ಕಳು ಮಾತನಾಡತೊಡಗಿದರೆ ಏನಾದೀತು?